Sri H. SIDDAVEERAPPA.—The exact stock available I do not know. But it is sought to be disposed of through a private agency which I have already stated.

Sri M. LINGANNA.—Is it a fact that because of high rate, that the stock of these agricultural implements is being held up?

Sri H. SIDDAVEERAPPA.—I cannot definitely say it is due to that fact.

ಶ್ರೀ ವಿ. ಮಸಿಯಪ್ಪ.—ಅನೇಕ ತಾಲ್ಲೂಕುಗಳಲ್ಲಿರುವ ರಿಜಿಸ್ಟರ್ಡ್ ಸೊಸೈಟಿಗಳಿಗೆ ಹಣವನ್ನು ಮುಂಗಡವಾಗಿ ಕಟ್ಟಿದ್ದರೂ ಅನೇಕ ತಿಂಗಳಾದರೂ ಅವರಿಗೆ ಕಬ್ಬಿಣದ ಕೋಟಾ ಸರಬರಾಯಿ ಆಗದಿರುವ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಆ ಪ್ರಶ್ನೆಗಾಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಹಣವನ್ನು ಮುಂಗಡವಾಗಿ ಕಟ್ಟಿದ್ದರೂ ಸಾಮಾನುಗಳನ್ನು ಸರಬರಾಯಿ ಮಾಡಿಲ್ಲ ಏಕೆ?

Sri H. SIDDAVEERAPPA.—If the Hon'ble Member brings any specific instance to my notice, I shall look into it.

ಯಾವ ಸೊಸೈಟಿಗೆ ಎಂಬುದನ್ನು ತಿಳಿಸಿದರೆ ನಾಳೆಯೇ ತರಿಸಿಕೊಡುತ್ತೇನೆ.

ಶ್ರೀ ವಿ. ಮಸಿಯಪ್ಪ.—ಈ ವ್ಯವಸಾಯದ ಉಪಕರಣಗಳನ್ನು ತಯಾರಿಸತಕ್ಕವರಿಗೆ ಸ್ಕ್ಯಾಪ್ ಐರ್ಡ್ ಅನ್ನು ಸರಬರಾಯಿ ಮಾಡಿದರೆ ಬೆಲೆಯಲ್ಲಿ ಒಂದಾಣೆ ಕಡಮೆಯಾಗುತ್ತದೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—The purpose is to make quota available at a cheaper rate to the agriculturists.

ಶ್ರೀ ವಿ. ಮಸಿಯಪ್ಪ.—ಇದನ್ನು ಅಧಿಕ ಪ್ರಮಾಣದಲ್ಲಿ ಮಲ್ಟಪರ್ಪಸ್ ಸೊಸೈಟಿಗಳಿಗೆ ಒದಗಿಸಲು ಪ್ರಯತ್ನ ಮಾಡುತ್ತೀರಾ?

Sri H. SIDDAVEERAPPA.—We shall examine it.

Sri K. S. VASAN.—May I know the name of the blacklisted merchant in Davangere?

Mr. SPEAKER.—Not necessary.

Sri K. S. VASAN.—Let the public know the blacklisted merchant so that they may be careful.

(*No answer*)

ಶ್ರೀ ಟಿ. ಹನುಮಯ್ಯ.—ಮೈಸೂರು ದೇಶದಲ್ಲಿ ನೂರಕ್ಕೆ ತೊಂಭತ್ತು ಭಾಗ ಈ ಕಬ್ಬಿಣದ ಸಾಮಾನುಗಳ ಅವಶ್ಯಕತೆ ಹಳ್ಳಿಯ ರೈತರುಗಳಿಗೆ ಅಧಿಕವಾಗಿರುತ್ತದೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಈಗಾಗಲೇ ಅನೇಕ ಸದಸ್ಯರು ಅನೇಕ ರೀತಿಗಳಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದಾರೆ.

Sri H. SIDDAVEERAPPA.—We have requested 75 Co-operative Societies out of which 45 have already agreed and for the rest we have issued a notice.

ಶ್ರೀ ಟಿ. ಹನುಮಯ್ಯ.—ತಾವು ಹಳ್ಳಿಯ ಸೊಸೈಟಿಗಳಿಗೆ ಕೊಡಿ. ಹಳ್ಳಿ ರೈತರು ಪಟ್ಟಣಗಳಲ್ಲಿರತಕ್ಕ ಸೊಸೈಟಿಗೆ ಬಂದು ಕೊಂಡುಕೊಳ್ಳಲು ಕಷ್ಟವಿದೆ, ಅವರಿಗೆ ಸಾಧ್ಯವಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆಯೋ ಅವುಗಳಿಲ್ಲಕ್ಕೂ ಕೊಡೋಣ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಆ ಹಳ್ಳಿ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲವೆಂದು ತಮ್ಮ ಭಾವನೆಯೇ!

ಶ್ರೀ ಎಚ್. ಸಿದ್ದವೀರಪ್ಪ.—ಅವುಗಳ ವಿಚಾರದಲ್ಲ ನಿಮಗಿಂತಲೂ ಹೆಚ್ಚಿನ ನಮ್ರತೆಯ ಭಾವನೆ ನನ್ನ ಗುಂಟು.

ಶ್ರೀ ಟಿ. ಹನುಮಯ್ಯ.—ಆ ಹಳ್ಳಿಯಲ್ಲಿರತಕ್ಕ ಅನೇಕ ರೈತರಿಗೆ ಸಮರ್ಪಕವಾದ ರೀತಿಯಲ್ಲಿ ಕಬ್ಬಿಣದ ಸಾಮಾನುಗಳು ದೊರೆಯುತ್ತಿಲ್ಲವೆಂಬ ಅಂಶ ತಮ್ಮ ಅವಗಾಹನೆಗೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಹಳ್ಳಿಯವರಿಗೆ ತೊಂದರೆಯಾಗಬಾರದೆಂಬ ತತ್ವವನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ.

Special Revenue Inspectors for Depressed Classes (Discrepancy in pay)

Q.—650. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state.—

(*a*) whether it has come to their notice that no graded pay is sanctioned to the Special Revenue Inspectors for Depressed Classes;

(*b*) the reason for the disparity between the scale of pay of the Special Revenue Inspectors for Depressed Classes and the scale of pay of the regular Revenue Inspectors of the Taluks in the State;

(*c*) whether they will consider the desirability of revising the scale of pay of the Special Revenue Inspectors for Depressed Classes in the State?

Sri H. M. CHANNABASAPPA. (Minister for Revenue and Agriculture).

(*a*) Yes.

(*b*) The Special Revenue Inspectors for Depressed Classes are given a fixed pay of Rs. 50 per mensem. The regular Revenue Inspectors have larger duties and responsibilities compared to the Special Revenue Inspectors for

(SRI H. M. CHANNABASAPPA.)

Depressed Classes who are entrusted only with the work relating to the Amelioration of Depressed Classes.

(*c*) Does not arise in view of reply to clause (*b*).

ಶ್ರೀ ಜಿ. ಪುಟ್ಟಸ್ವಾಮಿ.—ಡಿಪ್ರೆಸ್ಡ್‌ಕ್ಲಾಸ್ ರೆವೆನ್ಯೂ ಇನ್‌ಸ್ಪೆಕ್ಟರುಗಳು ಒಂದು ತಾಲ್ಲೂಕಿನಲ್ಲಿ ಪ್ರಯಾಣ ಮಾಡಿ ಅವರ ಕೆಲಸವನ್ನು ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವಯಾವ ಜ್ಯೂರಿಸ್‌ಡಿಕ್ಷನ್ ನಿಗದಿ ಮಾಡಲಾಗಿರುತ್ತದೆಯೋ ಆಯಾ ಜ್ಯೂರಿಸ್‌ಡಿಕ್ಷನ್‌ನಲ್ಲಿ ಕೆಲಸಮಾಡಬೇಕೆಂದು ವಿಧಾಯಕವಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಒಂದು ಹುದ್ದೆಯನ್ನು ನಿರ್ಮಿಸಿದಮೇಲೆ ಅದರ ಕೆಲಸವನ್ನು ನಿರ್ವಹಿಸುವುದಕ್ಕೆ ಎಷ್ಟು ವೇತನ ಬೇಕೋ ಅಷ್ಟನ್ನು ಕೊಡದೆ ಇದ್ದರೆ ಆ ಕೆಲಸವನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲವೆನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ವರ್ತಮಾನದ ಪ್ರಕಾರವಾಗಿ ಸಾಕಷ್ಟು ಕೆಲಸವಿಲ್ಲವೆಂದು ತಿಳಿದುಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಹೋಬಳಿ ರೆವೆನ್ಯೂ ಇನ್‌ಸ್ಪೆಕ್ಟರಿಗೆ ಎಷ್ಟು ಕೆಲಸವಿದೆಯೋ ಅಷ್ಟೇಕೆಲಸ ಡಿಪ್ರೆಸ್ಡ್‌ಕ್ಲಾಸ್ ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರಿಗೆ ಇಲ್ಲದೇ ಇದ್ದರೂ ಕೂಡ nature of work ಒಂದೇ ಸಮನಾಗಿರುತ್ತದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Regular Revenue Inspector ಗೆ ಅನೇಕತರಹ ಕೆಲಸಗಳಿರುತ್ತವೆ. ಅವುಗಳ ಹೆಚ್ಚಿಕೆ ಕೆಲವು ನಿರ್ದಿಷ್ಟವಾದ ಕೆಲಸಗಳನ್ನು ಮಾತ್ರ ಕೊಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಇತರ ಪ್ರಾಂತಗಳಲ್ಲಿ ಡಿಪ್ರೆಸ್ಡ್‌ಕ್ಲಾಸ್ ರೆವೆನ್ಯೂ ಇನ್‌ಸ್ಪೆಕ್ಟರುಗಳಿಗೆ ಏನು ತಲಬು ಕೊಡುತ್ತಾರೆನ್ನುವುದನ್ನು ಸರ್ಕಾರದವರು ವಿಚಾರ ಮಾಡಿ ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇತರ ಪ್ರಾಂತಗಳಲ್ಲಿ ಯಾವತರಹ ಸ್ಕೀಲುಗಳಿವೆ ಎಂಬ ವಿಚಾರ ಈಗ ನನ್ನ ಮುಂದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಅದನ್ನು ತರಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ—ಅವಶ್ಯಕವಾದ ಪಕ್ಷದಲ್ಲಿ ತರಿಸಿಕೊಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ರೆವೆನ್ಯೂ ಇನ್‌ಸ್ಪೆಕ್ಟರುಗಳು ಕೇವಲ ಹತ್ತು ರೂಪಾಯಿ ಪ್ರಯಾಣ ಭತ್ಯವನ್ನ ಪಡೆದು ಒಂದು ತಾಲ್ಲೂಕಿನಲ್ಲೆಲ್ಲಾ ಸಂಚರಿಸಿ ಕೆಲಸ ನಿರ್ವಹಿಸಲು ಸಾಧ್ಯವಿಲ್ಲವೆನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ಹತ್ತು ರೂಪಾಯಿಗಳ ಅಲೋಯನ್ಸ್ ಮಾತ್ರ ಕೊಡತಕ್ಕದ್ದು.

ಶ್ರೀ ಜಿ. ಪುಟ್ಟಸ್ವಾಮಿ.—ಒಂದುತಾಲ್ಲೂಕಿನಲ್ಲಿ ಪ್ರಯಾಣಮಾಡಲು 10 ರೂಪಾಯಿಗಳ ಪ್ರಯಾಣಭತ್ಯ ಸಾಲದೆನ್ನುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದುಅಭಿಪ್ರಾಯದ ಮಾತು.

ಶ್ರೀ ಸಿ. ಟಿ. ಹನುಮಂತಯ್ಯ.—ಡಿಪ್ರೆಸ್ಡ್‌ಕ್ಲಾಸ್ ಇನ್‌ಸ್ಪೆಕ್ಟರುಗಳಿಗೆ ಅಷ್ಟು ಕೆಲಸವಿಲ್ಲವೆಂದು ಹೇಳಿದಿರಿ. ಇವರಿಗೆ ಮನೆಗಳನ್ನು ಕಟ್ಟುವುದಕ್ಕೆ ಸಂಬಂಧಿಸಿದ ರಿಕಾರ್ಡು ಮಾತ್ರ ಕಳುಹಿಸಿ, ದರಖಾಸ್ತು ರಿಕಾರ್ಡು, ಜಾಗ ಅಕ್ವೈರ್ ಮಾಡಿಕೊಳ್ಳುವ ರಿಕಾರ್ಡ್, ಮರ ಮುಟ್ಟುಗಳಿಗೆ ಸಂಬಂಧಿಸಿದ ರಿಕಾರ್ಡುಗಳನ್ನು ಕಳುಹಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಏನೇನು ಕೆಲಸಗಳನ್ನು ಮಾಡಬೇಕೆಂದು ವಿಧಾಯಕವಾಗಿದೆಯೋ ಆ ಕೆಲಸಗಳನೆಲ್ಲ ಮಾಡಬೇಕು. ಆದರೆ ಇವರಲ್ಲ ಕೆಲವರಿಗೆ ದರಖಾಸ್ತು ಅರ್ಜಿಗಳನ್ನು ಬಲ್ ಅಪ್ ಮಾಡತಕ್ಕದ್ದು, ಮುಂತಾದ ಕೆಲಸಗಳ ಅನುಭವ ಎಲ್ಲದೆ ಇರುವುದರಿಂದ ಅಂಥ ನಿರ್ದಿಷ್ಟವಾದ ಸಂದರ್ಭಗಳಲ್ಲ ಮಾತ್ರ ಆಯಾ ಕೆಲಸಗಳನ್ನು ಬೇರೆಯವರಿಗೆ ಕೊಡಲಾಗಿದೆ ಎಂದು ಸರ್ಕಾರಕ್ಕೆ ತಿಳಿದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರುಗಳಿಗೆ ಏನೇನು ಕೆಲಸಗಳನ್ನು ಸರ್ಕಾರದವರು ನಿಗದಿ ಮಾಡಿದ್ದಾರೆಂಬುದನ್ನು ತಿಳಿಸುತ್ತೀರಾ ?

SRI H. M. CHANNABASAPPA.—The duties of the Special Revenue Inspectors for Depressed Classes are:

(1) To build up darkhast records of Depressed Class and submit them to the Amildar.

(2) Subject to statutory provisions, to lay out, demarcate, and assign sites to the applicants with the assistance of the Taluk Officers.

(3) Supervise the construction of houses etc.

(4) Whenever necessary to build up classified records relating to Depressed Class position.

(5) To collect statistical information relating to literacy, etc. of Harijans.

(6) To draw up Programme of works for the entire Taluk well in advance and place it for the acceptance of Taluk Committees.

(7) To be in charge of building materials, tiles etc., and to maintain forms, registers, and other accounts that are required in this behalf.

ಶ್ರೀ ಸಿ. ಟಿ. ಹನುಮಂತಯ್ಯ.—ಇಷ್ಟು ಕೆಲಸವನ್ನು ನಿಗದಿ ಮಾಡಿದ್ದರೂ ಕೂಡ, ಇಡೀ ತಾಲ್ಲೂಕನ್ನೇ ಸಂಚಾರ ಮಾಡಬೇಕಾಗಿದ್ದರೂ ಕೂಡ, ಅವರಿಗೆ ಕೊಡತಕ್ಕ ಪ್ರಯಾಣ ಭತ್ಯ ಸಾಲದೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಕೆ. ಲಕ್ಕಪ್ಪ.—ಡಿಪ್ರೆಸ್ಡ್ ಕ್ಲಾಸ್ ಇಕ್ಸ್‌ಪೆಕ್ಟರುಗಳಿಗೂ, ರೆಗ್ಯುಲರ್ ಇಕ್ಸ್‌ಪೆಕ್ಟರುಗಳಿಗೂ ವಿಧಾಯಕ ಮಾಡಿರುವ ವಿದ್ಯಾರ್ಹತೆಯಲ್ಲಿ ವ್ಯತ್ಯಾಸವೇನಾದರೂ ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಡಿಪ್ರೆಸ್ಡ್‌ಕ್ಲಾಸ್ ರೆವೆನ್ಯೂ ಇಕ್ಸ್‌ಪೆಕ್ಟರುಗಳ ಸ್ಥಾನಕ್ಕೆ ಎರಡನೇ ಗ್ರೇಡ್ ಗುಮಾಸ್ತರನ್ನು ನೇಮಕ ಮಾಡಲಾಗುತ್ತಿದೆ. ರೆಗ್ಯುಲರ್ ಇಕ್ಸ್‌ಪೆಕ್ಟರುಗಳಲ್ಲಿ ಎರಡು ತರಹವಿದೆ, ಮೊದಲನೆ ದರ್ಜೆ ಮತ್ತು ಎರಡನೆ ದರ್ಜೆ ಎಂದು. ಮೊದಲನೆ ದರ್ಜೆಗೆ ಪದವೀಧರರಾಗಿರಬೇಕು. ಎರಡನೆ ದರ್ಜೆಗೆ ಎಸ್. ಎಸ್. ಎಲ್. ಸಿ. ಆಗಿರಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಈಗ ಸ್ಪೆಷಲ್ ರೆವೆನ್ಯೂ ಇಕ್ಸ್‌ಪೆಕ್ಟರುಗಳು ಮಾಡಬೇಕಾದ ಕೆಲಸಗಳನ್ನು ಸಭೆಯ ಅವಗಾಹನೆಗೆ ತಂದಿರಿ. ಇದರಲ್ಲಿ ದರಖಾನ್ತು, ಅಕ್ಯಿಜಿಷ್ಟ್ ರಿಕಾರ್ಡ್‌ಗಳನ್ನು ಬಿಲ್ಡ್‌ಅಪ್ ಮಾಡುವುದು ಇವೆಲ್ಲವೂ ಇವೆ. ಹೀಗಿರುವಾಗ ತಾವು ಕೊಟ್ಟ ಉತ್ತರದಲ್ಲಿ ದರಖಾನ್ತು, ರಿಕಾರ್ಡು ಮತ್ತು ಅಕ್ಯಿಜಿಷ್ಟ್ ರಿಕಾರ್ಡುಗಳನ್ನು ಮಾಡುವ ಕೆಲಸ ಇವೆಲ್ಲವೂ ಬೇರೆ ಇಕ್ಸ್‌ಪೆಕ್ಟರುಗಳಿಗೆ ವಹಿಸಲಾಗಿದೆ ಎಂದು ತಿಳಿಸಿದ್ದೀರಿ. ಒಂದಕ್ಕೊಂದಕ್ಕೆ ಕಾಂಟ್ರಡಿಕ್ಟರಿ ಆಗುವುದಿಲ್ಲವೆ ?

Sri H. M. CHANNABASAPPA.—Where in any particular case, if any person is found to be incompetent to build up darakhast records on account of inefficiency or inexperience, in such cases, those darkhast records will be got build up by the regular Revenue Inspectors.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಸ್ಪೆಷಲ್ ರೆವೆನ್ಯೂ ಇಕ್ಸ್‌ಪೆಕ್ಟರುಗಳಿಗೆ ನಿಮ್ಮ ತರಗತಿಯವರಿಗೆ ಸಂಬಂಧಪಟ್ಟ ದರಖಾನ್ತು ಮತ್ತು ಅಕ್ಯಿಜಿಷ್ಟ್ ರಿಕಾರ್ಡ್ ಕೆಲಸ/ಜಾಸ್ತಿಯಾದ ಮೇಲೆ ಅವರ ಕೆಲಸ ಹೆಚ್ಚಾಗಿದೆ ಎಂದು ಆ ಕೆಲಸವನ್ನು ಅವರಿಂದ withdraw ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ದರಖಾನ್ತು ಮತ್ತು ಅಕ್ಯಿಜಿಷ್ಟ್ ರಿಕಾರ್ಡ್ ಕೆಲಸವನ್ನು ಇವರಿಗೆ ಕೊಡಕೂಡದೆಂದು ಆಜ್ಞೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

Sri H. M. CHANNABASAPPA.—Not that I know of so far. Anyway, I will examine it.

Road between Maralavadi and Hunasanahalli (construction).

Q.—6. Sri S. KARIYAPPA (Virupakshapura).—

Will the Government be pleased to state:—

(*a*) whether there is a representation for several years past for construction of a road between Maralavadi and Hunasanahalli in Kanakapura Taluk;

(*b*) the names of village through which this proposed road is to pass;

(*c*) whether there is an estimate prepared for this road;

(*d*) if it is so, the estimated cost?

A.—Sri H. M. CHANNABASAPPA (Minister for Revenue and Agriculture).—

(*a*) No.

(*b*), (*c*) and (*d*) Do not arise in view of reply to clause (*a*).

ಶ್ರೀ ಎಸ್. ಕರಿಯಪ್ಪ.—ಇದು ಫಾರೆಸ್ಟ್ ರಸ್ತೆ ಅಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಎಸ್. ಕರಿಯಪ್ಪ.—ಈ ಫಾರೆಸ್ಟ್ ರಸ್ತೆಯನ್ನು ಟಾರ್ ಮಾಡತಕ್ಕ ವಿಚಾರದಲ್ಲಿ, ಅದನ್ನು ರಿಪೇರಿ ಮಾಡತಕ್ಕ ವಿಚಾರದಲ್ಲಿ, ಅಭಿವೃದ್ಧಿಪಡಿಸತಕ್ಕ ವಿಚಾರದಲ್ಲಿ ಈ ಸಭೆಯಲ್ಲಿ ಹಲವು ಬಾರಿ ಖೋತಾ ಸೂಚನೆಗಳೂ, ಪ್ರಶ್ನೆಗಳೂ ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಫಾರೆಸ್ಟ್ ರಸ್ತೆಯನ್ನು ಅರಣ್ಯ ಇಲಾಖೆಯವರ ಉಪಯೋಗಕ್ಕಾಗಿ ಅವರು ಮೈಂಟೈನ್ ಮಾಡಿಕೊಂಡಿದ್ದಾರೆ. ಅವರು ಸಂಚಾರ ಮಾಡಲು ಎಷ್ಟುಮಟ್ಟಿಗೆ ಇಟ್ಟುಕೊಳ್ಳಬೇಕೋ ಅಷ್ಟುಮಟ್ಟಿಗೆ ಇಟ್ಟುಕೊಂಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಇದು ಫಾರೆಸ್ಟ್ ರಸ್ತೆಯಾದರೂ ಕೂಡ ಇತರ ಜನಗಳು ಈ ರಸ್ತೆಯಲ್ಲಿ ಸಂಚಾರ ಮಾಡಕೂಡದೆಂದು ಅಡ್ಡಿ ಇದೆಯೇ? ಇದನ್ನು ಅರಣ್ಯ ಇಲಾಖೆಯವರು ಮಾತ್ರ ಉಪಯೋಗಿಸಬೇಕೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಾಕಿಯವರು ಈ ರಸ್ತೆಯಲ್ಲಿ ತಿರುಗಾಡಿದರೂ ನಾವು ಬೇಡವೆನ್ನುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಜನಜಾನವಾರುಗಳಿಗೂ 12 ಗ್ರಾಮಗಳ ಜನರಿಗೂ ಅನುಕೂಲವಾಗಿರತಕ್ಕ ಈ ರಸ್ತೆಯನ್ನು ಅಭಿವೃದ್ಧಿ ಮಾಡಿಸಬೇಕೆಂದು ಬಹು ಕಾಲದಿಂದ ಕೇಳುತ್ತಿದ್ದರೂ ಸಹ ಇದಕ್ಕೆ ಏತಕ್ಕೆ ಗಮನ ಕೊಟ್ಟಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಬಂದಿರುವ ಸಮಾಚಾರದ ಪ್ರಕಾರ 1952-53ನೇ ಸಾಲಿನಲ್ಲಿ 2,058 ರೂಪಾಯಿಗಳನ್ನು ಖರ್ಚುಮಾಡಿ ರಿಪೇರಿ ಮಾಡಿದ್ದಾರೆ. 1953-54ರಲ್ಲಿ 2,196 ರೂಪಾಯಿಗಳನ್ನು ಖರ್ಚುಮಾಡಿ ಪುನಃ ರಿಪೇರಿ ಮಾಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಈ ರಸ್ತೆಯ ಉದ್ದವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಪ್ಪತ್ತು ಮೈಲಿ ಎರಡು ಫರ್ಲಾಂಗ್.

ಶ್ರೀ ಎಸ್. ಕರಿಯಪ್ಪ.—ಇದಕ್ಕೆ ಎರಡು ಸಾವಿರ ರೂಪಾಯಿ ಸಾಕಾಗುತ್ತದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಮೈಂಟೆನೆನ್ಸ್ ಗ್ರಾಂಟ್ ಅಷ್ಟೆ.